- -

ಅಸಲು ದಾವಾ ನಂ:53/2016
ಡಿ.ಡಬ್ಲ್ಯೂ: 01

**ದಿನಾಂಕಃ 12-11-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಎನ್ ಟಿ ಎಸ್., ವಾದಿ ಪರ ವಕೀಲರಿಂದ**

ನಾನು 3 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ವಾದಿಯು ರಾಮಚಂದ್ರಪ್ಪ, ಪಾಪಣ್ಣ ಶಿವಣ್ಣ, ಈರಣ್ಣ, ಆತ್ಮಲಿಂಗಸ್ವಾಮಿ, ಸುರೇಶ, ಪಾತಲಿಂಗಮ್ಮ, ವಿಜಯಕುಮಾರ ಹಾಗೂ ಶ್ರೀನಿವಾಸ್ ರವರ ಮೇಲೆ ದಾವೆ ಹೂಡಿರುತ್ತಾರೆ. ವಾದಿಯರು ಏತಕ್ಕಾಗಿ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನಾನು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಮ್ಮ ವಕೀಲರು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರವನ್ನು ಸಲ್ಲಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಬೊಮ್ಮಯ್ಯ ಬಿನ್ ಪಾಲಯ್ಯ ನನ್ನ ತಾತ. ನನ್ನ ತಾತ ಬೊಮ್ಮಯ್ಯ ಬಿನ್ ಪಾಲಯ್ಯರವರಿಗೆ 3 ಜನ ಗಂಡು ಮಕ್ಕಳು ಹಾಗೂ 5 ಜನ ಹೆಣ್ಣು ಮಕ್ಕಳು. ಮೊದಲನೇ ಮಗ ರಾಮಚಂದ್ರಪ್ಪ ನನ್ನ ತಂದೆ. ಸದರಿ ರಾಮಚಂದ್ರಪ್ಪರವರಿಗೆ ನಿಂಗಮ್ಮ ಮತ್ತು ಸರೋಜಮ್ಮ ಎಂಬ ಇಬ್ಬರು ಹೆಂಡತಿಯರು ಎಂದರೆ ಸಾಕ್ಷಿಯು ನಿಂಗಮ್ಮ ಒಬ್ಬಳೇ ಹೆಂಡತಿ ಎಂದು ನುಡಿಯುತ್ತಾರೆ. ಸರೋಜಮ್ಮನಿಗೆ ವೀರೇಶ ಮತ್ತು ರಾಜೇಶ್ವರಿ ಎಂಬ ಇಬ್ಬರು ಮಕ್ಕಳ ಎಂದರೆ ನನಗೆ ಗೊತ್ತಿಲ್ಲ. ಆ ವೀರೇಶ ಹೆಂಡತಿ ಸಿದ್ದಮ್ಮಳೇ 1 ನೇ ವಾದಿ ಎಂದರೆ ಸರಿ. 1 ನೇ ವಾದಿಗೆ 2 ರಿಂದ 4 ನೇ ವಾದಿ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ.

ನನ್ನ ತಾತ ಬೊಮ್ಮಯ್ಯನಿಗೆ ರಾಮಚಂದ್ರಪ್ಪ, ಈರಣ್ಣ ಮತ್ತು ಪಾಲಯ್ಯ ಎಂಬ ಮೂರು ಜನ ಗಂಡು ಮಕ್ಕಳು ಎಂದರೆ ಸರಿ. ಸದರಿ ಮೂವರು ಮೃತರಾಗಿರುತ್ತಾರೆ. ಬೊಮ್ಮಯ್ಯನಿಗೆ ಹೆಸರಿಗೆ ಇರುವ ಸರ್ವೇ ನಂ.526 ರಲ್ಲಿ 4 ಎಕರೆ 18 ಗುಂಟೆ ಜಮೀನನ್ನು ಬೊಮ್ಮಯ್ಯ ಹಾಗೂ ಆತನ ಮೂರು ಜನ ಗಂಡು ಮಕ್ಕಳು 4 ಭಾಗ ವಾಗಿ ವಿಂಗಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ರಾಮಚಂದ್ರಪ್ಪರವರು ವಾದಿಯ ಗಂಡ ವೀರೇಶಗೆ ದಿಃ05-12-2003 ರಂದು ಮರಣಶಾಸನ ಪತ್ರವನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ನನ್ನ ತಂದೆಯವರು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ರಾಮಚಂದ್ರಪ್ಪರವರನ್ನು 2 ನೇ ಹೆಂಡತಿ ಸರೋಜಮ್ಮ ಹಾಗೂ ಮಗ ವೀರೇಶರವರು ಪಾಲನೆ ಪೋಷಣೆಯನ್ನು ಮಾಡುತ್ತಿದ್ದರು ಎಂದರೆ

ಸರಿಯಲ್ಲ. ಆದಕಾರಣ ರಾಮಚಂದ್ರಪ್ಪರವರು ಉಳಿಸಿಕೊಂಡಿದ್ದ 1 ಎಕರೆ 6 ಗುಂಟೆ ಜಮೀನನ್ನು ವೀರೇಶನಿಗೆ ವಿಲ್ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.

ಆರ್.ವೀರೇಶ ಹೇಗೆ ಮೃತರಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪಾಪಣ್ಣ ತಂದೆ ರಾಮಚಂದ್ರಪ್ಪ ಎಂದರೆ ನಾನು ಎಂದರೆ ಸರಿ. ದಿಃ03-03-2013 ರಲ್ಲಿ ವೀರೇಶರವರಿಗೆ ಚಳ್ಳಕೆರೆ ಸರ್ಕಲ್ ನಲ್ಲಿ ಅಪಘಾತವಾಗಿರುತ್ತದೆ ಎಂದರೆ ಸರಿ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸಾಕ್ಷಿಯು 1 ನೇ ವಾದಿಯು ನಮ್ಮ ಏರಿಯಾದಲ್ಲಿ ಇದ್ದಿದ್ದರಿಂದ ನಮ್ಮನ್ನು ಕರೆದುಕೊಂಡು ಹೋಗಿ ಹೇಳಿಕೆಯನ್ನು ಕೊಡಿಸಿರುತ್ತಾರೆ. ನಾನು ದಿಃ03-03-2013 ರಲ್ಲಿ ನನ್ನ ತಂದೆಗೆ ಇಬ್ಬರು ಹೆಂಡತಿಯರು ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಭರಮಯ್ಯ ನನ್ನ ಮಾವ. ಈಶ್ವರ ನನ್ನ ಅಳಿಯ. ನವೀನ ತಂದೆ ರುದ್ರಪ್ಪ ನನಗೆ ಗೊತ್ತಿಲ್ಲ. ಸದರಿಯವರು ಅಪಘಾತಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡಿದ್ದಾರೆ ಎಂದರೆ ಕೊಟ್ಟಿರಬಹುದು. ಭರಮಯ್ಯ, ಪಾಪಣ್ಣ ಮತ್ತು ವೀರೇಶರವರು ಒಂದೇ ಕುಟುಂಬಕ್ಕೆ ಸೇರಿರುತ್ತಾರೆ ಎಂದರೆ ಸರಿಯಲ್ಲ.

ದಿಃ05-12-2003 ರ ವಿಲ್ ಪ್ರಕಾರ 1 ನೇ ವಾದಿಯು ಖಾತೆ ಬದಲಾವಣೆಗೆ ತಹಶಿಲ್ದಾರ ಕಚೇರಿಗೆ ಅರ್ಜಿಯನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ಅರ್ಜಿಗೆ ನಾವು ತಕರಾರನ್ನು ಸಲ್ಲಿಸಿರುತ್ತೇನೆ. ನಾನು ಮತ್ತು ಪಾಪಣ್ಣ ತಕರಾರು ಸಲ್ಲಿಸಿರುತ್ತೇವೆ ಎಂದರೆ ಸಾಕ್ಷಿಯು ಎಲ್ಲರು ಸೇರಿ ತಕರಾರು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ತಹಶಿಲ್ದಾರ ಕಚೇರಿಯಲ್ಲಿ ಆರ್ ಆರ್ ಟಿ ಸಿ ನಂ.121/2015-16 ಪ್ರಕರಣ ನಮ್ಮ ಪರ ಆಗಿರುತ್ತದೆ. ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಚಳ್ಳಕೆರೆ ಓ.ಎಸ್.ನಂ.211/2015 ರಂತೆ ನಾವು ನಮ್ಮ ಅಣ್ಣ ತಮ್ಮಂದಿರ ವಿರುದ್ದ ದಾವೆ ಹೂಡಿರುತ್ತೇವೆ ಎಂದರೆ ಸರಿ. ಪಾತಲಿಂಗಮ್ಮ, ವಿಜಯಾ ಮತ್ತು ಸೀನಾ ರವರು ನಿಂಗಮ್ಮ, ಪಾಪಣ್ಣ, ಶಿವಣ್ಣ, ಶಿವಕುಮಾರ, ಆತ್ಮಲಿಂಗಸ್ವಾಮಿ ಹಾಗೂ ಸುರೇಶರವರ ವಿರುದ್ದ ಸದರಿ ದಾವೆಯನ್ನು ಈ ದಾವೆಯ ದಾವಾ ಷೆಡ್ಯೂಲ್ ಗೆ ಸಂಬಂಧಿಸಿದಂತೆ ಹೂಡಿರುತ್ತಾರೆ ಎಂದರೆ ಸರಿ.

**(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.